# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 280 |
| ಸದಸ್ಯರ ಹೆಸರು | : | ಶ್ರೀ.ಪ್ರಕಾಶ್ ಕೆ.ರಾಠೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 15.02.2023 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾ ಕೇಂದ್ರ ಹಾಗೂ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು; | ವಿಜಯಪುರ ಜಿಲ್ಲೆಯಲ್ಲಿ ಒಟ್ಟು 142 ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತೆ ನೀಡಲಾಗಿದೆ. |

| ಕ್ರ.ಸಂ. | ಸಂಸ್ಥೆ | ಸಂಖ್ಯೆ |
|---|---|---|
| 1 | ಪಾಲಿಕ್ಲಿನಿಕ್ | 01 |
| 2 | ಪಶುಆಸ್ಪತ್ರೆಗಳು | 15 |
| 3 | ಪಶುಚಿಕಿತ್ಸಾಲಯಗಳು | 72 |
| 4 | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ | 49 |
| 5 | ಸಂಚಾರಿ ಪಶುಚಿಕಿತ್ಸಾಲಯಗಳು | 5 |
| | ಒಟ್ಟು | 142 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಪಶು ಆಸ್ಪತ್ರೆಗಳಲ್ಲಿ ಖಾಲಿ ಇರುವ ಪಶುವೈದ್ಯ ಹಾಗೂ ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು; | ವಿಜಯಪುರ ಜಿಲ್ಲೆಯಲ್ಲಿರುವ ಪಶುವೈದ್ಯರ ಹಾಗೂ ಇತರೆ ಸಿಬ್ಬಂದಿ ಹುದ್ದೆಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಇ) | ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇರುವ ಸಂಸ್ಥೆಗಳಿಗೆ ಜಾನುವಾರುಗಳ ಚಿಕಿತ್ಸೆಗೆ ತೊಂದರೆ ಆಗದಂತೆ ಅಧಿಕ ಪ್ರಭಾರ ವ್ಯವಸ್ಥೆ ಮಾಡಲಾಗಿರುತ್ತದೆ.<br><br>ಪ್ರಸ್ತುತ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮದಡಿ ದಿನಾಂಕ:08-03-2022 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸಲಾದ ಮೂಲ |

| | | |
|---|---|---|
| | | ದಾಖಲಾತಿಗಳ ಪರಿಶೀಲನೆಯನ್ನು ಮಾಡಲಾಗಿದ್ದು, ಕನ್ನಡ ಭಾಷೆ ಅಭ್ಯಾಸ ಮಾಡದ ಅಭ್ಯರ್ಥಿಗಳಿಗೆ ಕೆ.ಇ.ಎ. ಮುಖಾಂತರ ಕನ್ನಡ ಭಾಷೆ ಪರೀಕ್ಷೆ ನಡೆಸಲಾಗಿರುತ್ತದೆ. ಅದರನ್ವಯ ಅರ್ಹತಾ ಪಟ್ಟಿ ತಯಾರಿಸಲಾಗುತ್ತಿದೆ.<br><br>ಈ ನೇಮಕಾತಿ ಕುರಿತು ಶೈಕ್ಷಣಿಕ ವಿದ್ಯಾರ್ಹತೆಯನ್ನು (Merit) ಆಧರಿಸಿ ಆಯ್ಕೆ ಮಾಡುವುದು ಸರಿಯಲ್ಲವೆಂದು ಕೆಲವು ಅಭ್ಯರ್ಥಿಗಳು (50. ಜನ) ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದರ ಮುಖಾಂತರ ಹಾಗೂ ಇನ್ನಿತರೆ ಶೈಕ್ಷಣಿಕ ನ್ಯೂನತೆಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:6662/2022 ರಂತೆ ದಾವೆಯನ್ನು ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಈ ಪ್ರಕರಣವನ್ನು ಮಾನ್ಯ KSAT ಬೆಂಗಳೂರಿನ ನ್ಯಾಯಾಲಯಕ್ಕೆ ವರ್ಗಾಯಿಸಿರುತ್ತಾರೆ.<br><br>ಪ್ರಕರಣದ ವಿಚಾರಣೆಯು ಮುಗಿದಿದ್ದು, ಅಂತಿಮ ತೀರ್ಪಿಗೆ ಕಾಯ್ದಿರಿಸಲಾಗಿದೆ. ಮಾನ್ಯ ನ್ಯಾಯಾಲಯದ ಆದೇಶದಂತೆ ಪರಿಶೀಲಿಸಿ ಕ್ರಮ ವಹಿಸಲಾಗುವುದು.<br><br>250 ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು KEA ಮುಖಾಂತರ ಅಧಿಸೂಚನೆಯನ್ನು ಹೊರಡಿಸಿ ಆಯ್ಕೆ ಪ್ರಕ್ರಿಯೆ ಚಾಲನೆಯಲ್ಲಿದೆ.<br><br>ಡಿ ದರ್ಜೆ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದ್ದು, ಈಗಾಗಲೆ ಇಲಾಖೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ 2256 'ಡಿ' ದರ್ಜೆ ಹುದ್ದೆಗಳಿಗೆ ಸೇವೆಯನ್ನು ಪಡೆಯಲಾಗಿದೆ. |

<table>
<tr>
<td>ಈ)</td>
<td>ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಸಂಚಾರಿ ಪಶು ವೈದ್ಯಕೀಯ ವಾಹನಗಳನ್ನು ಒದಗಿಸಲಾಗಿದೆ; ಹಾಲಿ ಇರುವ ಬೇಡಿಕೆಗಳೆಷ್ಟು? (ವಿವರ ಒದಗಿಸುವುದು)</td>
<td>2021-22 ನೇ ಸಾಲಿನಲ್ಲಿ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ Establishment & Strengthening of Veterinary Hospitals and Dispensaries (ESVHD) ಯೋಜನೆ ಅಡಿಯಲ್ಲಿ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪ್ರತಿ ಒಂದು ಲಕ್ಷ ಜಾನುವಾರುಗಳಿಗೆ (ದನ, ಎಮ್ಮೆ, ಹಂದಿ, ಕುರಿ & ಮೇಕೆ) ಒಂದರಂತೆ ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕ ಹೊಂದಿರಬೇಕಾಗಿರುತ್ತದೆ.<br><br>
20ನೇ ಜಾನುವಾರು ಗಣತಿಯನ್ವಯ ವಿಜಯಪುರ ಜಿಲ್ಲೆಯಲ್ಲಿ 13,14,820 ಜಾನುವಾರು ಘಟಕಗಳಿದ್ದು, ಪ್ರಸ್ತುತ ಪಶು ಸಂಜೀವಿನಿ ಯೋಜನೆಯಡಿ 1 ವಾಹನ ಕಾರ್ಯನಿರ್ವಹಿಸುತ್ತಿದೆ.<br><br>
ವಿಜಯಪುರ ಜಿಲ್ಲೆಯಲ್ಲಿ 13,14,820 ಜಾನುವಾರು ಘಟಕಗಳಿಗೆ 14 ಸಂಚಾರಿ ಪಶು ಚಿಕಿತ್ಸಾ ವಾಹನಗಳ ಬೇಡಿಕೆಯಿದ್ದು, ಈಗಾಗಲೇ 14 ವಾಹನಗಳನ್ನು ಒದಗಿಸಲಾಗಿದೆ. ಹೆಚ್ಚುವರಿಯಾಗಿ ವಿಜಯಪುರದ ಪಾಲಿಕ್ಲಿನಿಕ್ ಗೆ 01 ಸಂಚಾರಿ ವಾಹನವನ್ನು ಸಹ ಒದಗಿಸಲಾಗಿದೆ. ಒಟ್ಟಾರೆಯಾಗಿ ವಿಜಯಪುರ ಜಿಲ್ಲೆಗೆ 15 ಸಂಚಾರಿ ಪಶು ಚಿಕಿತ್ಸಾ ವಾಹನಗಳನ್ನು ಒದಗಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.<br>
<table>
<tr><th>ಕ್ರ.ಸಂ</th><th>ವಾಹನ ಒದಗಿಸಲಾದ ಸ್ಥಳಗಳ ವಿವರ</th><th>ವಾಹನಗಳ ಸಂಖ್ಯೆ.</th></tr>
<tr><td>1</td><td>ಮುದ್ದೇಬಿಹಾಳ</td><td>1</td></tr>
<tr><td>2</td><td>ಸಿಂದಗಿ</td><td>1</td></tr>
<tr><td>3</td><td>ಇಂಡಿ</td><td>1</td></tr>
<tr><td>4</td><td>ಚಡಚಣ</td><td>1</td></tr>
<tr><td>5</td><td>ತ್ರಿಕೋಟ</td><td>1</td></tr>
<tr><td>6</td><td>ವಿಜಯಪುರ</td><td>1</td></tr>
<tr><td>7</td><td>ಬಸವನಬಾಗೇವಾಡಿ</td><td>1</td></tr>
<tr><td>8</td><td>ನಿಡಗುಂದ</td><td>1</td></tr>
</table>
</td>
</tr>
</table>

| | | |
|---|---|---|
| 9 | ತಾಳಿಕೋಟಿ | 1 |
| 10 | ಬಬಲೇಶ್ವರ | 1 |
| 11 | ಕೊಲ್ಹಾರ | 1 |
| 12 | ದೇವರಹಿಪ್ಪರಗಿ | 1 |
| 13 | ಆಲಮೇಲ | 1 |
| 14 | ಬಸವನಬಾಗೇವಾಡಿ | 1 |
| 15 | ಪಾಲಿಕ್ಲಿನಿಕ್ ವಿಜಯಪುರ | 1 |
| | ಒಟ್ಟು | 15 |

ಸಂ: ಪಸಂಮೀ ಇ-15 ಪಸಸೇ 2023

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

# ಅನುಬಂಧ-1

| ಕ್ರಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1 | ಉಪ ನಿರ್ದೇಶಕರು | 2 | 2 | 0 |
| 2 | ಮುಖ್ಯ ಪಶುವೈದ್ಯಾಧಿಕಾರಿ | 13 | 10 | 3 |
| 3 | ಪಶುವೈದ್ಯಾಧಿಕಾರಿ | 86 | 65 | 21 |
| 4 | ಜಾನುವಾರು ಅಭಿವೃದ್ಧಿ ಅಧಿಕಾರಿ | 7 | 7 | 0 |
| 5 | ಸಹಾಯಕ ಆಡಳಿತ ಅಧಿಕಾರಿ | 1 | 1 | 0 |
| 6 | ಜಾನುವಾರು ಅಧಿಕಾರಿ | 10 | 7 | 3 |
| 7 | ಲ್ಯಾಬ್ ಟೆಕ್ನೀಷಿಯನ್ | 1 | 0 | 1 |
| 8 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 65 | 65 | 0 |
| 9 | ಪಶುವೈದ್ಯಕೀಯ ಪರೀಕ್ಷಕರು | 62 | 44 | 18 |
| 10 | ಕಿರಿಯ ಪಶುವೈದ್ಯಕೀಯ ಪರೀಕ್ಷಕರು | 75 | 68 | 7 |
| 11 | ಅಧೀಕ್ಷಕರು | 2 | 2 | 0 |
| 12 | ಪ್ರಥಮ ದರ್ಜೆ ಸಹಾಯಕರು | 4 | 4 | 0 |
| 13 | ದ್ವಿತೀಯ ದರ್ಜೆ ಸಹಾಯಕರು | 7 | 7 | 0 |
| 14 | ಬೆರಳಚ್ಚುಗಾರ | 3 | 2 | 1 |
| 15 | ವಾಹನ ಚಾಲಕರು | 7 | 2 | 5 |
| 16 | ಅನುಚರರು | 231 | 62 | 169 |
| | ಒಟ್ಟು | 576 | 348 | 228 |

ನಿರ್ದೇಶಕರು